# ದರ್ಪಣ


ಜೊಲ್ಲೆ ಗ್ರೂಪ್
ವಾರ್ತಾ ಪತ್ರ
(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)
ನವೆಂಬರ್ 2022–ಸಂಪುಟ–6 ಸಂಚಿಕೆ–12




ನಿಪ್ಪಾಣಿಯಲ್ಲಿ ಚಿಕ್ಕೋಡಿ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಅವರ ಜನ್ಮದಿನದ ಪ್ರಯುಕ್ತ 10 ಜನ ಅನಾಥ ಹೆಣ್ಣು ಮಕ್ಕಳಿಗೆ ಸುಕನ್ಯಾ ಸಮೃದ್ಧಿ ಪಾಸ್ ಬುಕ್‌ಗಳನ್ನು ವಿತರಿಸುತ್ತಿರುವುದು.

**ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ)**

ಕ್ರೀಯಾತ್ಮಕ ಹಾಗೂ ಪ್ರಗತಿಶೀಲ ಅರ್ಥವ್ಯವಸ್ಥೆ




## ಜನಪರ ಮತ್ತು ಪ್ರಗತಿಪರ ಚಿಂತನೆಗಳನ್ನು ಮಾಡುವ ಸಂಸದರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಅವರ 60ನೇ ಹುಟ್ಟುಹಬ್ಬದ ಶುಭಾಶಯಗಳು

ಮಹಾ ಮಾನವತಾವಾದಿ ಶ್ರೀ ಜಗಜ್ಯೋತಿ ಬಸವಣ್ಣವರ "ಕಾಯಕವೇ ಕೈಲಾಸ" ಎಂಬ ತತ್ವವನ್ನು ತಮ್ಮ ಜೀವನದಲ್ಲಿ ಹಾಸು ಹೊಕ್ಕಾಗಿಸಿಕೊಂಡು ಮಾತಿಗೆ ಪ್ರಾಶಸ್ತ್ಯ ನೀಡದೆ ಕೃತಿ ಮತ್ತು ಹಲವಾರು ಸಮಾಜೋಪಯೋಗಿ ಕಾರ್ಯ ಚಟುವಟಿಕೆಯಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡು "ಸ್ವಂತ ಸುಖಾಯಃ" ಕಾರ್ಯದ ಪರಿಕಲ್ಪಣೆಯನ್ನು ದೂರಿರಿಸಿ ಜನರ ಸುಖ ಶಾಂತಿ ನೆಮ್ಮದಿಗೋಸ್ಕರ ನಿರಂತರ ಚಿಂತನೆಗಳನ್ನು ಮಾಡುವ ಭವ್ಯ ಭವಿಷತ್ತಿನ ಯೋಜನೆಗಳನ್ನು ರೂಪಿಸುವ ಅನುಷ್ಠಾನಗೊಳಿಸಲು ನಿರಂತರ ಸಂಘರ್ಷ ಮಾಡುವ ಪರ ಹಿತವನ್ನೇ ಬಯಸುವ ಅಣ್ಣಾಜೀ, ವೈನಿಜೀ ಹಾಗೂ ಶ್ರೀ ಜ್ಯೋತಿಪ್ರಸಾದ ಮತ್ತು ಕು. ಬಸವಪ್ರಸಾದ ಅವರನ್ನು ಪಡೆದ ನಾವೇ ಸೌಭಾಗ್ಯ ಶಾಲಿಗಳು. ನಿಷ್ಕಲ್ಮಶ ಮನಸ್ಸು ಮತ್ತು ಪರಿಶುದ್ಧ ಭಾವನೆಗಳಿಂದ ಈ ಭಾಗದ ಜನತೆಯ ಮನ ಗೆದ್ದಿರುವುದು ನಮ್ಮೆಲ್ಲರಿಗೂ ಗೊತ್ತಿರುವ ಸಂಗತಿ ಯಾಗಿದೆ.

ಅವಕಾಶಗಳನ್ನು ಸದುಪಯೋಗ ಮಾಡಿಕೊಂಡು ಸಹಕಾರ, ಶಿಕ್ಷಣ, ಸಮಾಜ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಅಗಣಿತ ಸಾಧನೆಗಳನ್ನು ಮಾಡಿ ಸಹಸ್ರಾರು ಕುಟುಂಬಗಳಿಗೆ ಆಶ್ರಯ ನೀಡಿರುವ ಶ್ರೇಯಸ್ಸು ಚಿಕ್ಕೋಡಿ ಲೋಕಸಭಾ ಸದಸ್ಯರು ಸಹಕಾರರತ್ನ ಶ್ರೀ, ಅಣ್ಣಾಸಹೇಬ ಜೊಲ್ಲೆ ಅವರಿಗೆ ಸಲ್ಲುತ್ತದೆ. ಸಹಕಾರ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವ ಕಾರ್ಮಿಕರು ಮತ್ತು ಶಿಕ್ಷಕರ ಕುಟುಂಬಗಳು ಇವರನ್ನೇ ಅವಲಂಬಿಸಿವೆ. ಇವರೆಲ್ಲರ ಬದುಕು ಸಂತಸಮಯವಾಗಬೇಕಾದರೆ ಅಣ್ಣಾಜೀ ಯವರ ಸಹಾಯ ಹಸ್ತ ಮತ್ತು ಆಶಿರ್ವಾದ ತುಂಬಾ ಮುಖ್ಯವಾಗಿದೆ. ಸದಾ ಪರರಿಗೆ ಸಹಾಯ ಸಹಕಾರ, ನೆರವು ಮತ್ತು ನೈತಿಕ ಬೆಂಬಲ ನೀಡುವ ಮೂಲಕ ಜನರ ಮನಸ್ಸಿನಲ್ಲಿ ಆಳವಾಗಿ ಬೇರೂರಿ ಪ್ರತಿಕ್ಷಣ ಸಮಾಜದ ಸರ್ವತೋಮುಖ ಬೆಳವಣಿಗೆಗೆ ಅಭಿವೃದ್ಧಿಪರ ಚಿಂತನೆಗಳನ್ನು ಮಾಡುವ ಅಣ್ಣಾಜೀ ಅವರಿಗೆ ಭಗವಂತ ಆಯುಷ ಆರೋಗ್ಯ ಭಾಗ್ಯ ಕಲ್ಪಿಸಲೆಂದು ಆಶಿಸೋಣ.

ಬದಲಾವಣೆಯು ನಿಸರ್ಗದ ನಿಯಮವಾಗಿದೆ. ಮನುಷ್ಯ ನಿರಂತರ ಬದಲಾವಣೆಗೆ ಒಳಗಾಗುತ್ತಿದ್ದಾನೆ. ಬದಲಾವಣೆಯೇ ಇಂದಿನ ಆಧುನಿಕ ಜಗತ್ತಿನ ನಿರ್ಮಾಣಕ್ಕೆ ನಾಂದಿಯಾಗುತ್ತಿದೆ. ಇಂದು ಮನುಷ್ಯ ಕಂಪ್ಯೂಟರ್ ಮತ್ತು ತಂತ್ರಜ್ಞಾನ ಯುಗದಲ್ಲಿ ಬದುಕುತ್ತಿದ್ದಾನೆ ಆದುದರಿಂದ ಇದಕ್ಕನುಗುಣವಾಗಿ ಸಹಕಾರ, ಶಿಕ್ಷಣ, ಔದ್ಯೋಗಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ನಿರಂತರ ಬದಲಾವಣೆಗಳನ್ನು ತರಲು ಪ್ರಯತ್ನಿಸುತ್ತಿರುವ, ಹೊಸ–ಹೊಸ ಯೋಜನೆಗಳನ್ನು ಹುಟ್ಟುಹಾಕಿ ಅನುಷ್ಠಾನಗೊಳಿಸುತ್ತಿರುವ ಜನಪ್ರಿಯ ಸಂಸದರು ಹಾಗೂ ಜೊಲ್ಲೆ ಉದ್ಯೋಗ ಸಮೂಹದ ಸಂಸ್ಥಾಪಕರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಅವರಿಗೆ 60 ನೇ ಹುಟ್ಟು ಹಬ್ಬದ ಹಾರ್ಧಿಕ ಶುಭಾಷಯಗಳು.

ಸಾರ್ವಜನಿಕ ಸೇವೆ ಮತ್ತು ಮಾನವೀಯ ಕಾಳಜಿ ಎಂಬ ಎರಡು ವಿಶಿಷ್ಟ ಗುಣಗಳನ್ನು ತಮ್ಮಲ್ಲಿ ಹಾಸುಹೊಕ್ಕಾಗಿಸಿಕೊಂಡಿರುವ ಸಹಕಾರ ಮಹರ್ಷಿ ಶ್ರೀ. ಅಣ್ಣಾಸಾಹೇಬ ಶಂಕರ ಜೊಲ್ಲೆ ಅವರು ಕರ್ನಾಟಕದ ಗಡಿಭಾಗದ ಜನಜೀವಾಳದಲ್ಲಿ ಒಂದಾಗಿರುವುದು ಅವರ ವಿಶಿಷ್ಟ ವ್ಯಕ್ತಿತ್ವವಾಗಿದೆ. ಗ್ರಾಮೀಣ ಪ್ರದೇಶದ ಸುಧಾರಣೆ ಮತ್ತು ಗ್ರಾಮೀಣ ಸಮುದಾಯದ ಜನರ ಮೇಲೆ ಹೊಂದಿರುವ ಅಪಾರ ಪ್ರೀತಿ, ಶಿಸ್ತು, ಗ್ರಾಮೀಣ ಪ್ರದೇಶದ ಸೌಂದರ್ಯ ಪ್ರಜ್ಞೆ ಹೆಚ್ಚಿಸುವ ನಿರಂತರ ಪ್ರಯತ್ನ ಈ ಭಾಗದ ಜನರಿಗೆ ಗೊತ್ತಿರುವ ಸಂಗತಿಯಾಗಿದೆ. ಗ್ರಾಮೀಣ ಪ್ರದೇಶದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ಔದ್ಯೋಗಿಕ ಗುಣಮಟ್ಟಕ್ಕಾಗಿ ಉತ್ತಮ ಕೊಡುಗೆಗಳನ್ನು ನೀಡಲು ಭಗಿರತ ಪ್ರಯತ್ನ ಮಾಡುತ್ತಿರುವುದು ಈ ಭಾಗದ ಜನರ ಸೌಭಾಗ್ಯವಾಗಿದೆ.

ಸಮಾಜದಲ್ಲಿ ಬೇರೂರಿರುವ ನಿರುದ್ಯೋಗ, ಬಡತನ, ಹಸಿವು ಮಹಿಳೆಯರ ಮೇಲಾಗುವ ಶೋಷಣೆ ಇತ್ಯಾದಿ ಸಮಸ್ಯೆಗಳನ್ನು ದೂರೀಕರಿಸಲು ಅವಿರತ ಶ್ರಮಿಸುತ್ತಿರುವುದು ಇವರ ಸಾಮಾಜಿಕ ಕಳಕಳಿಗೆ ಹಿಡಿದ ಕನ್ನಡಿಯಾಗಿದೆ.

ಇವರು ಕಟ್ಟಿಬೆಳೆಸಿದ ಸಹಕಾರ ಶಿಕ್ಷಣ ಸಮಾಜ ಸೇವಾ ಸಂಸ್ಥೆ ಸಹಸ್ರಾರು ವಿದ್ಯಾರ್ಥಿಗಳಿಗೆ ವಿದ್ಯಾಧಾರೆ ಎರೆಯುವ ವಿಶ್ವವಿದ್ಯಾಲಯದ ರೂಪದಲ್ಲಿ ಕಂಗೊಳಿಸುತ್ತಿದೆ. ಗಡಿಭಾಗದ ಜನಸಾಮಾನ್ಯರ ಆಶೋತ್ತರಗಳಿಗೆ ಸ್ಪಂದಿಸುತ್ತಾ, ಗಡಿ ಭಾಗದ ಜನತೆಗೆ ಕಿರೀಟ ಪ್ರಾಯವಾಗಿದೆ. ದೀನದಲಿತರ, ದುರ್ಬಲರ, ಬಡವರ, ಹಾಗೂ ಗ್ರಾಮೀಣ ಸಮುದಾಯಗಳ ಸರ್ವತೋಮುಖ ಏಳ್ಗೆ ಮತ್ತು ಕಲ್ಯಾಣಕ್ಕಾಗಿ 60 ರ ಗಡಿ ದಾಟಿದರೂ ಕೂಡ ಸಂಘಟನಾ ಚತುರತೆ, ಕ್ರೀಯಾಶೀಲತೆ, ದೂರದೃಷ್ಟಿತ್ವ ಮತ್ತು ನಾಯಕತ್ವದ ಮೌಲ್ಯಗಳನ್ನು ಬದುಕಿನ ವಿಧಾನದಲ್ಲಿ ಮೈಗೈಸಿಕೊಂಡು ಚೇತನದ ಚಿಲುಮೆಯಂತೆ ಪ್ರಾಮಾಣಿಕ ಪ್ರಯತ್ನದೊಂದಿಗೆ ಯಶಸ್ಸಿನ ಪಥದತ್ತ ಸಾಗಿ ಜನಮನಗೆಲ್ಲುತ್ತಿರುವ ನಮ್ಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ. ಅಣ್ಣಾಸಾಹೇಬ ಶಂ. ಜೊಲ್ಲೆ ಯವರು ಜನಮನ ಮಂದಿರದಲ್ಲಿ ಪೂಜಿಸಲ್ಪಡುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ.

ನೇರ ನಡೆನುಡಿಗೆ ಹೆಸರುವಾಸಿಯಾದ ಇವರು ಅತ್ಯುತ್ತಮ ದಕ್ಷ ಆಡಳಿತಗಾರರಾಗಿ ನಾಡಿನ ಜನರ ಪ್ರೀತಿ ಸಂಪಾದಿಸಿದ್ದಾರೆ. ಶ್ರೀ ಬೀರೇಶ್ವರ ಕೋ.ಆಪ್. ಕ್ರೆಡಿಟ್ ಸೊಸಾಯಟಿಯನ್ನು ಹುಟ್ಟುಹಾಕಿ ಸಂಸ್ಥಾಪಕ ಅಧ್ಯಕ್ಷರಾಗಿ ಜನಪರ, ರೈತಪರ ಮತ್ತು ಅಭಿವೃದ್ಧಿಪರ ಕೆಲಸ ಕಾರ್ಯಗಳನ್ನು ಮಾಡಿ ಕರ್ನಾಟಕ ಅಲ್ಲದೇ ಬೇರೆ ರಾಜ್ಯಗಳಲ್ಲಿಯೂ ಹೆಸರುವಾಸಿಯಾಗಿ ಅನೇಕ ವಿಶಿಷ್ಟ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಅಷ್ಟೇ ಅಲ್ಲದೇ ಆ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿರುವುದು ಇವರ ಜನಸೇವಾ ಮನೋಭಾವನೆಗೆ ಸತ್ಯ ನಿದರ್ಶನಗಳಾಗಿವೆ. ರೈತರು ಮತ್ತು ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಿ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಇವರಂತಹ ನಾಯಕರು ಕನ್ನಡ ನಾಡಿಗೆ ಬೇಕು. 153 ಶ್ರೀ ಬೀರೇಶ್ವರ ಬ್ಯಾಂಕಿನ ಶಾಖೆಗಳನ್ನು ಸ್ಥಾಪಿಸಿ ನಾಡಿನೆಲ್ಲೆಡೆ ಸಮಾಜಮುಖಿ ಕಾರ್ಯಗಳಿಗೆ ಅನುಕೂಲಿಸಿದ್ದಾರೆ. 2000ಕ್ಕೂ ಮಿಕ್ಕಿ ಜನರಿಗೆ ಉದ್ಯೋಗ ಅವಕಾಶ ಮಾಡಿಕೊಟ್ಟು ಉದ್ಯೋಗಿಗಳ ಕುಟುಂಬಗಳಿಗೆ ಆಸರೆಯಾಗಿ ಪ್ರತಿಯೊಂದು ಕುಟುಂಬದಲ್ಲಿ ಸುಖ, ಶಾಂತಿ, ನೆಮ್ಮದಿ ನೆಲೆಸುವಂತೆ ಮಾಡಿದ್ದಾರೆ. ಒಮ್ಮೊಮ್ಮೆ ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವ ಇವರ ಮಾತುಗಳು ಕಠೋರವೆನಿಸಿದರೂ ಮನಸ್ಸು ಮತ್ತು ಹೃದಯ ಹೂಗಿಂತಲು ಮೃದುವಾಗಿರುವುದು ಅಷ್ಟೇ ಸತ್ಯ.

ಇಂತಹ ವಿಶಿಷ್ಟ ವ್ಯಕ್ತಿತ್ವ ಹೊಂದಿರುವ ನಮ್ಮೆಲ್ಲರ ಪೂಜ್ಯನಿಯ ಅಣ್ಣಾಜೀ ಅವರಿಗೆ ದೇವರು ಒಳ್ಳೆಯ ಆಯುರಾರೋಗ್ಯ ಕಲ್ಪಿಸಿ ಸಂಸ್ಥೆಯ ಏಳ್ಗೆಗೆ ಮತ್ತು ಸಮಾಜದ ಏಳ್ಗೆಗೆ ಅನುಕೂಲಿಸಿ ದುಡಿಯುವ ವರ್ಗಕ್ಕೆ ಸದಾ ನೆರಳಾಗುವ ಚೈತನ್ಯ ನೀಡಲೆಂದು ಶುಭ ಆಶಿಸಿ ಪ್ರಾರ್ಥಿಸೋಣ !! ಸದಾ ನಮಗೆ ಸಲಹೆ ಸೂಚನೆ ಮಾರ್ಗದರ್ಶನ ನೀಡಿ ನಮ್ಮೆಲ್ಲರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವ ಅಣ್ಣಾಜೀ ಅವರಿಗೆ ಕೋಟಿ ಕೋಟಿ ನಮನಗಳು.

**ಪ್ರೊ. ಬಾಬಾಸಾಹೇಬ ಆರ್. ಕಾಮನಗೋಳ**
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ

# ಗ್ರಾಮೀಣ ಭಾಗದ ಆಶಾಕಿರಣ "ಜೊಲ್ಲೆ ಗ್ರೂಪ್"

ಅಖಂಡ ಕರ್ನಾಟಕದಲ್ಲಿ ಸಹಕಾರದಿಂದ ಮಾನವೀಯತೆಯನ್ನು ಜಾಗೃತಗೊಳಿಸಿ ಮಾನವನ ಜೀವನಕ್ಕೆ ಮತ್ತು ಬದುಕಿಗೆ ಬಸವಣ್ಣನವರ ಹಾಗೂ ಅಕ್ಕಮಹಾದೇವಿಯವರ ಸಮಾನತೆಯ ಪ್ರತಿಬಿಂಬವನ್ನು ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಯಕ್ಸಂಬಾ ಗ್ರಾಮದಲ್ಲಿ ಸರ್ವರ ಸಹಕಾರದೊಂದಿಗೆ ಹಾಗೂ ಸಹಕಾರಿ ಅವಿನಾಭಾವ ಸಂಬಂಧದೊಂದಿಗೆ ಲೋಕಸಭಾ ಸದಸ್ಯರಾದ ಮಾನ್ಯ ಶ್ರೀ. ಅಣ್ಣಾಸಾಹೇಬ ಶಂಕರ ಜೊಲ್ಲೆ ಹಾಗೂ ಧರ್ಮಪತ್ನಿಯವರಾದ ಮಾನ್ಯ ಸೌ. ಶಶಿಕಲಾ ಅಣ್ಣಾಸಾಹೇಬ ಜೊಲ್ಲೆ ಕರ್ನಾಟಕ ಸರಕಾರದ ಮುಜರಾಯಿ, ಹಜ ಮತ್ತು ವಕ್ಫ್ ಖಾತೆಯ ಮಂತ್ರಿಗಳಾದ ಇವರೊಂದಿಗೆ ಗಡಿ ಕರ್ನಾಟಕದ ಎಲ್ಲ ಸಹಕಾರಿ ಮನೋಭಾವನೆಯ ಪ್ರಜೆಗಳೊಂದಿಗೆ ಕೂಡಿ "ಬ್ರಿಟನ್ನನ್ ರಾಬರ್ಟ ಓವೆನ್‌ನ" ಸಹಕಾರ ತತ್ವಗಳನ್ನು ಜನತೆಯ ಮುಂದಿಟ್ಟು ಬಸವ ಸಹಕಾರ ತತ್ವಗಳನ್ನು ನಿಷ್ಕಲ್ಮಷ ನಿರ್ವಿಕಾರ ಮನೋಭಾವದಿಂದ ಜೊಲ್ಲೆ ಗ್ರೂಪ್‌ದಡಿ 1991 ರಲ್ಲಿ ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೊಸಾಯಟಿ ಲಿ, ಯಕ್ಸಂಬಾ ಈ ಸಂಸ್ಥೆಯ ಅಧ್ಯಕ್ಷರಾಗಿ ಪ್ರಗತಿಯ ಹುಟ್ಟಿನಿಂದ ಸಹಕಾರ ಬಂಡೆಯನ್ನು ಏಳೆದರು.

ಮಾನ್ಯ ಶ್ರೀ ಅಣ್ಣಾಸಾಹೇಬ ಶಂಕರ ಜೊಲ್ಲೆ ಅವರ ಜೊಲ್ಲೆ ಗ್ರೂಪ್ "ಸಹಕಾರವು ಬಸವಣ್ಣನವರ ಕಾಯಕ ಸಿದ್ಧಾಂತ ಹಾಗೂ ಶೋಷಣ ರಹಿತ ಸಮಾಜ ನಿರ್ಮಾಣ ಅಲ್ಲದೆ ಸರ್ವರಿಗೂ ಸಮಬಾಳು ಮತ್ತು ಮಹಿಳೆಯರಿಗೆ ಗೌರವ ಮೊದಲಾದವುಗಳನ್ನು ಪ್ರತಿಪಾದಿಸಿದ್ದಾರೆ, ಅಲ್ಲದೆ ಎಲ್ಲ ರೀತಿಯ ಶೋಷಣೆಯನ್ನು ನಿರ್ಮೂಲನ ಮಾಡಿ ಸಮಾಜದಲ್ಲಿ ಬಡತನ ಕಾಡದಂತೆ ಮಾಡಬೇಕು ಮತ್ತು ಸಮಾಜದಲ್ಲಿ ಪರಸ್ಪರ ಪ್ರೀತಿ ಗೌರವ ಬೆಳೆಸಬೇಕೆಂಬುದೇ ಜೊಲ್ಲೆ ಮನೆತನದ ಸಹಕಾರ ಗುಣವಾಗಿದೆ.

ಬಹುರಾಜ್ಯದಲ್ಲಿ ವಿಸ್ತಾರಗೊಂಡ ಶ್ರೀ ಬೀರೇಶ್ವರ ಕೋ-ಆಫ್ ಕ್ರೆಡಿಟ್ ಸೊಸಾಯ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್) ಇದರ ಮುಖ್ಯ ಉದ್ದೇಶವೆಂದರೆ ಉದ್ಯೋಗ ಸೃಷ್ಟಿ ಮೂಲಕ ಸಮಸಮಾಜ ನಿರ್ಮಿಸುವುದೇ ಆಗಿದೆ. ಸಮಾಜದಲ್ಲಿನ ಜಾತಿ, ಧರ್ಮ, ಅಸಮಾನತೆಯನ್ನು ಹಾಗೂ ಆರ್ಥಿಕ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದು ಸರ್ವರನ್ನು ಸಮಾಜದ ಮುಖ್ಯ ವಾಹಿನಿಯಲ್ಲಿ ಸಮಾನ ಸ್ಥಾನ ಮಾನಗಳನ್ನು ಕಲ್ಪಿಸುವ ಕನಸು ಕಂಡ ಶ್ರೀ. ಅಣ್ಣಾಸಾಹೇಬ ಶಂಕರ ಜೊಲ್ಲೆ ಲೋಕಸಭಾ ಸದಸ್ಯರು ಕಂಡ ಕನಸು ನನಸಾಗುತ್ತಿದೆ.

ಜನಪ್ರಿಯ ಲೋಕಸಭಾ ಸದಸ್ಯರಾದ ಶ್ರೀ ಅಣ್ಣಾಸಾಹೇಬ ಶಂಕರ ಜೊಲ್ಲೆಯವರು ತಮ್ಮ ಸಹಕಾರಿ ಸಂಘದಲ್ಲಿ ದುಡಿದು ವಯೋನಿವೃತ್ತ ಹೊಂದಿದ ನೌಕರರ ಕುಟುಂಬಗಳನ್ನು ನಿರ್ಲಕ್ಷಿಸದೇ ಸಹಕಾರಿ ಸಂಘದಲ್ಲಿರುವ ನೌಕರರ ಕುಟುಂಬಗಳು ಜೊಲ್ಲೆ ಗ್ರೂಪ್‌ನ ಕುಟುಂಬಗಳೆಂದು ಭಾವಿಸಿ, ಸ್ಪಂದಿಸಿ, ವಯೋ ನಿವೃತ್ತ ನೌಕರರಿಗೆ "ನಿವೃತ" ವೇತನ ಜಾರಿಗೆ ತಂದಿದ್ದು ಕರ್ನಾಟಕದಲ್ಲಿಯೇ ಹಾಗೂ ಸಹಕಾರಿ ಕ್ಷೇತ್ರದಲ್ಲಿ ಒಂದು ಅಮೋಘ ಕಾರ್ಯವೆಂದರೆ ಅತೀಶೋಯುಕ್ತಿ ಎಂದರೆ ತಪ್ಪಾಗಲಾರದು.

ಸಹಕಾರ ತತ್ವ ಮತ್ತು ಶರಣರ ತತ್ವ ಒಂದೇ ಆಗಿದ್ದು "ನಾನು ಎಲ್ಲರಿಗಾಗಿ, ಎಲ್ಲರೂ ನನಗಾಗಿ ಎಂದು ನುಡಿಯುತ್ತಾ "ಸರ್ವೆ ಜನ ಸುಖಿನೋ ಭವಂತು" ಎಂಬ ತತ್ವದಡಿ ಶ್ರೀ ಬೀರೇಶ್ವರ ಸಹಕಾರ ಸಮೂಹವು ಸಮಸಮಾಜ ನಿರ್ಮಿಸುತ್ತಾ ಸಾಗಿರುವುದು ಎಲ್ಲರ ಪ್ರೀತಿಗೆ ಪಾತ್ರವಾಗಿದೆ.

ಸಂಘದ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಸದಸ್ಯರು ದಕ್ಷತೆಯ ಮಾರ್ಗದರ್ಶನ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಪ್ರಾಮಾಣಿಕತೆ ಹಾಗೂ ಅಹಿಂಸಾ ತತ್ವ ಮತ್ತು ಸಿಬ್ಬಂದಿಯ ದಕ್ಷತೆಯಿಂದ ಸಂಘವು ಉತ್ತಮ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತೀದೆ, ಈ ಸಹಕಾರಿ ಸಂಘದ ಅಭಿವೃದ್ಧಿಗೆ ಹಾಗೂ ಸರ್ವರಿಗೂ ಮಾರ್ಗದರ್ಶಿಯಾಗಿ ಸಂಘದ ಸಂಸ್ಥಾಪಕ ಅಧ್ಯಕ್ಷರು, ಲೋಕಸಭಾ ಸದಸ್ಯರಾದ ಅಣ್ಣಾಸಾಹೇಬ ಜೊಲ್ಲೆ ಅವರ ದಕ್ಷ ಆಡಳಿತ ಕರುಣಾಮಯಿ ಮನಸ್ಸು ದಕ್ಷ ಮತ್ತು ಮುತ್ಸದ್ದಿ ಆಡಳಿತ, ಅಲ್ಲದೆ ಸತತ ಪರಿಶ್ರಮ ಇದಕ್ಕೆಲ್ಲ ಕಾರಣ ಎನ್ನಬಹುದು ಈ ಸಹಕಾರಿ ಸಂಘವು ಕರ್ನಾಟಕ ಹಾಗೂ ಮಹಾರಾಷ್ಟ್ರದವರೆಗೆ ಮಾದರಿಯಾಗಲಿ ಹಾಗೂ ಪ್ರಗತಿ ಪಥದಲ್ಲಿ ಮಾನವೀಯತೆಯ ರಸ ಹರಡಲೆಂಬುದೇ ನಮ್ಮೆಲ್ಲರ ಆಶಯವಾಗಿದೆ.

ನಿಪ್ಪಾಣಿ ಶಾಸಕಿಯಾದ ಮಾನ್ಯ ಸೌ. ಶಶಿಕಲಾ ಅಣ್ಣಾಸಾಹೇಬ ಜೊಲ್ಲೆಯವರ ಕಾರ್ಯವು ಜನೋಪಯೋಗಿ ಅವರ ಸೇವೆ ಜನರಿಗೆ ಬಡ ಕುಟುಂಬಗಳಿಗೆ ಹಾಗೂ ಹೆಣ್ಣು ಮಕ್ಕಳ 'ಅಬಲೆ' ಎಂಬುದನ್ನು ಅಳಕಿಸುವದರಲ್ಲಿ ಎತ್ತಿದ ಕೈ... ಬಸವಣ್ಣವರ ಸಮಾನತೆಗೆ ಜೋತು ಬಿದ್ದು ಸಮಾಜದಲ್ಲಿ ಸಮಾನತೆಯ ಬಿರುಗಾಳಿಯನ್ನು ಎಬ್ಬಿಸಿದ್ದಾರೆ. ಸೌ. ಶಶಿಕಲಾ ಜೊಲ್ಲೆ ಅವರು ಕಾಯಕದಿಂದ ಭಾಷಾ ರಹಿತ, ಜಾತಿ ರಹಿತ, ಮೇಲು-ಕೀಳು ಎಂಬ ಭಾವನೆಯನ್ನು ತೊರೆದು ಸರ್ವರ ಸಹಕಾರದಿಂದ ಸ್ತ್ರೀ ಎಂದರೆ ಸಮಾಜವನ್ನು ತಿದ್ದುವ ತಿಡುವ ಇಸ್ತ್ರೀ ಎಂಬುದನ್ನು ತೋರಿಸಿಕೊಟ್ಟು ಅಣ್ಣಾಸಾಹೇಬ ಜೊಲ್ಲೆಯವರು ಸಹಕಾರದಿಂದ ಸಹಕಾರಿ ಬಂಡೆಗೆ ಒಂದು ಚಕ್ರವಾಗಿ ಹೋರಾಡುತ್ತಿರುವ ಅಕ್ಕಮಹಾದೇವಿಯ ಸಮಾನತೆಯ ಗುಣ ಬಿಂಬಿಸುವಂತಾದರೆ ಶಶಿಕಲಾ ಜೊಲ್ಲೆ ಇನ್ನೊಂದು ಚಕ್ರವಾಗಿ ಸಮಾನತೆಯ ರಥವನ್ನು ಸಾಗಿಸುತ್ತಿರುವುದು ಶ್ಲಾಘನೀಯ, ಇದು ಹೀಗೆ ಸಾಗಲೆಂಬುದೇ ನಮ್ಮೆಲ್ಲರ ಆಶಯವಾಗಿದೆ.

ಶ್ರೀ. ಡಾ॥ ಪಿ. ಎಮ್. ಭೋಜೆ
ಹಿರಿಯ ಸಾಹಿತಿಗಳು, ವಿಶ್ರಾಂತ ಮುಖ್ಯೋಪಾಧ್ಯಾಯರು,
ಸದಲಗಾ, ತಾ॥ ಚಿಕ್ಕೋಡಿ ಜಿ॥ ಬೆಳಗಾವಿ

# ವಿಶ್ವ ಪ್ರಾಣಿಗಳ ಕಲ್ಯಾಣ ದಿನ

ವಿಶ್ವ ಪ್ರಾಣಿಗಳ ಕಲ್ಯಾಣ ದಿನವನ್ನು ಪ್ರತಿ ವರ್ಷ ಅಕ್ಟೋಬರ್ 4 ರಂದು ಆಚರಿಸಲಾಗುತ್ತದೆ. ಪ್ರಾಣಿ ಪೋಷಕ ಸಂತ ಎಂದು ಕರೆಯಲ್ಪಡುವ ಸೈಂಟ್ ಫ್ರಾನ್ಸಿಸ್ ಆಫ್ ಅಸ್ಸಿಸಿಯ ಹಬ್ಬದ ದಿನವನ್ನು ವಿಶ್ವ ಪ್ರಾಣಿಗಳ ದಿನವನ್ನಾಗಿ ಆಚರಿಸಲಾಗುತ್ತದೆ. ಜಗತ್ತಿನೆಲ್ಲೆಡೆ ಪ್ರಾಣಿ ಸಂಕುಲ ರಕ್ಷಣೆಗಾಗಿ ಪಣ ತೊಡುವ ಮತ್ತು ಜನರಲ್ಲಿ ಈ ಕುರಿತು ಅರಿವು ಮೂಡಿಸುವ ಪ್ರಯತ್ನವನ್ನು ಈ ದಿನದ ಮೂಲಕ ಸಾರಲಾಗುತ್ತದೆ. ವಿಶ್ವ ಪ್ರಾಣಿಗಳ ಕಲ್ಯಾಣ ದಿನವನ್ನು ವಿಶ್ವ ಪ್ರಾಣಿಗಳ ಪ್ರೇಮಿ ದಿನವನ್ನಾಗಿ ಕೂಡ ಆಚರಿಸಲಾಗುತ್ತದೆ. ಬನ್ನಿ ಈ ದಿನದ ಇತಿಹಾಸ, ಮಹತ್ವ ಮತ್ತು ಉದ್ದೇಶ ಕುರಿತಾದ ಇನ್ನಷ್ಟು ಮಾಹಿತಿಯನ್ನು ಪಡೆಯೋಣ.

**ವಿಶ್ವ ಪ್ರಾಣಿಗಳ ದಿನದ ಇತಿಹಾಸ :**

ಪ್ರಾಣಿ ಪೋಷಕ ಸಂತ ಎಂದು ಕರೆಯಲ್ಪಡುವ ಸೈಂಟ್ ಫ್ರಾನ್ಸಿಸ್ ಆಫ್ ಅಸ್ಸಿಸಿಯ ಹಬ್ಬದ ದಿನವನ್ನು ವಿಶ್ವ ಪ್ರಾಣಿಗಳ ದಿನವನ್ನಾಗಿ ಆಚರಿಸಲಾಗುತ್ತದೆ. ಮೊದಲಿಗೆ 1925ರಲ್ಲಿ ಜರ್ಮನಿಯ ಬರ್ಲಿನ್ನಲ್ಲಿ ಈ ದಿನವನ್ನು ಆಚರಿಸಲಾಯಿತು. ಜರ್ಮನ್ ಯಹೂದಿ, ಲೇಖಕರಾದ ಹೆನ್ರಿಕ್ ಜಿಮ್ಮರ್ಮ್ಯಾನ್ ಅವರು ಪ್ರಾಣಿಗಳಿಗೆ ಮೀಸಲಾಗಿರುವ ದಿನವನ್ನು ಪ್ರಾರಂಭಿಸಬೇಕೆಂದು 1931ರಲ್ಲಿ ಫ್ಲಾರೆನ್ಸ್‌ನಲ್ಲಿ ನಡೆದ ಪರಿಸರ ವಿಜ್ಞಾನಿಗಳ ಸಮಾವೇಶದಲ್ಲಿ ಅರ್ಜಿಯೊಂದನ್ನು ಸಲ್ಲಿಸಿದ್ದರು. ಈ ಕಾರ್ಯಕ್ರಮಕ್ಕೆ ಸುಮಾರು 5,000 ಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು. ಜಿಮ್ಮರ್ಮ್ಯಾನ್ ಅವರ ಸಲಹೆಯ ಮೇರೆಗೆ 1929ರಲ್ಲಿ ವಿಶ್ವ ಪ್ರಾಣಿ ದಿನವನ್ನು ಅಕ್ಟೋಬರ್ 4ರಂದು ಜಾರಿಗೊಳಿಸಲಾಯಿತು.

1931 ರಲ್ಲಿ ಇಟಲಿಯ ಫ್ಲಾರೆನ್ಸ್‌ನಲ್ಲಿ ನಡೆದ ವಿಶ್ವ ಸಂರಕ್ಷಣಾ ಸಂಸ್ಥೆಯ ಸಮ್ಮೇಳನದಲ್ಲಿ ವಿಶ್ವ ಪ್ರಾಣಿಗಳ ದಿನವು ಜಾಗತಿಕವಾಯಿತು. 2002 ರಲ್ಲಿ ಫಿನ್ನಿಷ್ ಅಸೋಸಿಯೇಷನ್ ಆಫ್ ಅನಿಮಲ್ ಪ್ರೊಟೆಕ್ಷನ್ ಅಸೋಸಿಯೇಷನ್ಸ್ ಈ ದಿನವನ್ನು ಆಚರಿಸಿತು ಮತ್ತು ಅದರ ಕಾರ್ಯಕ್ರಮಗಳಲ್ಲಿ ಶಾಲಾ ಮಕ್ಕಳನ್ನು ಸಹ ಒಳಗೊಂಡಿತ್ತು.

**ವಿಶ್ವ ಪ್ರಾಣಿ ದಿನದ ಮಹತ್ವ :**

ಮಾನವನ ಜನಜೀವನವು ಪರಿಸರ ಮತ್ತು ಪ್ರಾಣಿಗಳ ಮೇಲೆ ಬೀರುವ ಪರಿಣಾಮಗಳ ಕುರಿತಾಗಿ ಅರಿವು ಮೂಡಿಸುವುದರೆಡೆಗೆ ಈ ದಿನ ಗಮನ ಹರಿಸುತ್ತದೆ. ಪ್ರಾಣಿಗಳ ಹಕ್ಕುಗಳಿಗಾಗಿ ಕೆಲಸ ಮಾಡುವ ವ್ಯಕ್ತಿಗಳು ಮತ್ತು ಸಂಸ್ಥೆಗಳ ಒಳಗೊಳ್ಳುವಿಕೆಯ ಮೂಲಕ ಪ್ರಾಣಿಗಳ ಪ್ರೀತಿ, ಕಾಳಜಿ, ವಾತ್ಸಲ್ಯ ಮತ್ತು ರಕ್ಷಣೆಯನ್ನು ಪ್ರೋತ್ಸಾಹಿಸುವುದರಿಂದ ಇದನ್ನು "ಪ್ರಾಣಿ ಪ್ರೇಮಿಗಳ ದಿನ" ಎಂದೂ ಕರೆಯಲಾಗುತ್ತದೆ.

**ವಿಶ್ವ ಪ್ರಾಣಿ ದಿನದ ಗುರಿ :**

ವಿಶ್ವ ಪ್ರಾಣಿ ದಿನದ ವೆಬ್‌ಸೈಟ್‌ನಲ್ಲಿ ನೀಡಿರುವ ಮಾಹಿತಿಯ ಪ್ರಕಾರ ಪ್ರಾಣಿಗಳ ಸಂಖ್ಯೆಯನ್ನು ಹೆಚ್ಚಿಸುವುದು ಮತ್ತು ವಿಶ್ವದಾದ್ಯಂತ ಪ್ರಾಣಿಗಳ ಕಲ್ಯಾಣ ಗುಣಮಟ್ಟವನ್ನು ಸುಧಾರಿಸಲು ಸಹಾಯ ಮಾಡುವುದು ಈ ದಿನದ ಮುಖ್ಯ ಗುರಿಯಾಗಿದೆ.

ಪ್ರತಿಯೊಂದು ದೇಶದಲ್ಲೂ ಈ ದಿನವನ್ನು ವಿಭಿನ್ನ ರೀತಿಯಲ್ಲಿ ಆಚರಿಸಲಾಗುತ್ತದೆ. ಹೆಚ್ಚಿನ ಜಾಗೃತಿ ಮತ್ತು ಶಿಕ್ಷಣದ ಮೂಲಕ ಪ್ರಾಣಿಗಳನ್ನು ಯಾವಾಗಲೂ ಬುದ್ಧಿವಂತ ಜೀವಿಗಳೆಂದು ಗುರುತಿಸುವ ಮತ್ತು ಅವರ ಕಲ್ಯಾಣಕ್ಕೆ ಸಂಪೂರ್ಣವಾಗಿ ಪ್ರಯತ್ನವನ್ನು ಮಾಡುವ ಪ್ರಪಂಚವನ್ನು ನಾವು ನಿರ್ಮಾಣ ಮಾಡಬಹುದು ಎಂದು ವೆಬ್‌ಸೈಟ್ ನಲ್ಲಿ ಹೇಳಲಾಗಿದೆ.

## ಶಿವಶಂಕರ ಜೊಲ್ಲೆ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆ (ಸಿ.ಬಿ.ಎಸ್.ಇ) ನಣದಿ ಕ್ಯಾಂಪಸ್‌ನಲ್ಲಿ 67ನೇ

# ಕರ್ನಾಟಕ ರಾಜ್ಯೋತ್ಸವ



ಶಿವಶಂಕರ ಜೊಲ್ಲೆ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆ (ಸಿ.ಬಿ.ಎಸ್.ಇ)ನಣದಿ ಕ್ಯಾಂಪಸ್‌ನಲ್ಲಿ 67ನೇ ಕರ್ನಾಟಕ ರಾಜ್ಯೋತ್ಸವವನ್ನು ಅತೀ ವಿಜೃಂಭಣೆಯಿಂದ ಆಚರಿಸಲಾಯಿತು. ಆಶಾಜ್ಯೋತಿ ಬುದ್ಧಿಮಾಂದ್ಯ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ ಜ್ಯೋತಿಪ್ರಸಾದ ಜೊಲ್ಲೆಯವರು ಭುವನೇಶ್ವರಿಯ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸಿದರು.


ಜೊಲ್ಲೆ ಗ್ರೂಪ್‌ನ ಸಿ.ಇ.ಓ ಆದ ಡಾ. ವಿವೇಕಾನಂದ ಬಂಕೋಳ್ಳಿ ಅವರು "ಕನ್ನಡಿಗರ ಧೈರ್ಯ ಸ್ಥೈರ್ಯಗಳ ಕುರಿತು ಮಾತನಾಡುತ್ತ ಜನನಿ ಹಾಗೂ ಜನ್ಮ ಭೂಮಿ ಸ್ವರ್ಗಕ್ಕಿಂತ ಮಿಗಿಲಾದವು. ಪ್ರತಿಯೊಬ್ಬರೂ ಜೀವನದಲ್ಲಿ ಉದಾತ್ತ ಗುರಿಯನ್ನು ಹೊಂದುವುದರೊಂದಿಗೆ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕು" ಎಂದರು.

ಶಿಕ್ಷಕರಾದ ವಸಂತ ಹವಾಲ್ದಾರ ಅವರು ನಾಡು ನುಡಿಯ ಕುರಿತು ಮಾತನಾಡುತ್ತ, "ಎಲ್ಲ ಭಾಷೆಗಳನ್ನು ಗೌರವಿಸಬೇಕು ಹಾಗೂ ಕನ್ನಡ ಭಾಷೆಯನ್ನು ಪೂಜಿಸಬೇಕು. ಕರ್ನಾಟಕವು ಸಂಸ್ಕೃತಿ, ಸಂಪ್ರದಾಯ, ಕಲೆ, ವಾಸ್ತುಶಿಲ್ಪ, ಸಸ್ಯ ಹಾಗೂ ಪ್ರಾಣಿ ಸಂಪತ್ತಿನಿಂದ ಸಮೃದ್ಧವಾಗಿದೆ. ಕನ್ನಡಿಗರಿಗೆ ಕನ್ನಡ ಭಾಷೆಯೇ ಉಸಿರಾಗಬೇಕು. ಭಾಷೆ, ನೆಲ, ಜಲ, ಪರಂಪರೆ, ಸದಾಚಾರ, ಸಂಸ್ಕೃತಿ ಹಾಗೂ ಸಂಪ್ರದಾಯಗಳ ಬಗ್ಗೆ ಕನ್ನಡಿಗರಾದ ನಾವೆಲ್ಲರೂ ವಿಶೇಷವಾದ ಅಭಿಮಾನವನ್ನು ಇಟ್ಟುಕೊಳ್ಳುವಂತೆ ಕರೆ ನೀಡಿದರು".

ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳು ಭಾಷಣ, ಗಾಯನ, ನೃತ್ಯ, ರೂಪಕಗಳನ್ನು ಪ್ರದರ್ಶಿಸುವುದರ ಮೂಲಕ ಕನ್ನಡಾಭಿಮಾನವನ್ನು ಮೆರೆದರು. ವಿದ್ಯಾರ್ಥಿಗಳಾದ ಸೌಮ್ಯ ಕಮತೆ ಹಾಗೂ ಸೃಷ್ಟಿ ವರಾಳೆ ಕಾರ್ಯಕ್ರಮವನ್ನು ನಿರೂಪಿಸಿದರು. ಶಿಕ್ಷಕಿಯರಾದ ಸವಿತಾ ಮರೆನ್ನವರ ಸ್ವಾಗತಿಸಿದರು. ಸಂಗೀತಾ ಚಿಕ್ಕೋಡಿ ವಂದಿಸಿದರು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಗೀತಾ ನಾಯ್ಡು, ಸಮನ್ವಯ ಅಧಿಕಾರಿಯಾದ ಲಕ್ಷ್ಮಣ ಮಾಳಿ, ಪ್ರಾಚಾರ್ಯರಾದ


## ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ








ಮುಧೋಳ ತಾಲೂಕಿನ ಲೋಕಾಪುರ ಪಟ್ಟಣದಲ್ಲಿ ಜೊಲ್ಲೆ ಗ್ರೂಪ್‌ನ ಅಂಗ ಸಂಸ್ಥೆಯಾದ ಶ್ರೀ. ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ.,ಯಕ್ಸಂಬಾ. ಶಾಖೆ ಲೋಕಾಪುರ 80ನೇ ನೂತನ ಶಾಖೆಯ ಉದ್ಘಾಟನೆ ಸಮಾರಂಭವನ್ನು ದ್ವಾದಶ ಪೀಠಾಧೀಶರು ಶ್ರೀ ಕ್ಷೇತ್ರ ಜ್ಞಾನೇಶ್ವರಮಠ ಲೋಕಾಪುರ ಕಾಶಿನಾಥ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಯವರು ಉದ್ಘಾಟಿಸಿದರು.




ಇತ್ತೀಚೆಗೆ ನಿಧನರಾದ ಸವದತ್ತಿ ಕ್ಷೇತ್ರದ ಶಾಸಕರು ಹಾಗೂ ವಿಧಾನಸಭಾ ಉಪಸಭಾಧ್ಯಕ್ಷರಾದ ದಿ. ಆನಂದ ಮಾಮನಿ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಜೊಲ್ಲೆ ದಂಪತಿ ಪಾಲ್ಗೊಂಡು, ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುತ್ತಿರುವುದು.




ನಿಪ್ಪಾಣಿ ಮತಕ್ಷೇತ್ರದ ಶೆಂಡೂರ ಗ್ರಾಮದಲ್ಲಿ 28.60 ಲಕ್ಷ ರೂಪಾಯಿ ಮೊತ್ತದಲ್ಲಿ ನಿರ್ಮಿಸಿರುವ ಭಾರತ ನಿರ್ಮಾಣ ರಾಜೀವ ಗಾಂಧಿ ಸೇವಾ ಕೇಂದ್ರ ನೂತನ ಗ್ರಾಮ ಪಂಚಾಯತ್ ಕಟ್ಟಡವನ್ನು ಜೊಲ್ಲೆ ದಂಪತಿ ಉದ್ಘಾಟಿಸುತ್ತಿರುವ ದೃಶ್ಯ.



## ಸತ್ಕಾರ

ಯಡೂರಿನ ಕಾಡಸಿದ್ದೇಶ್ವರ ಮಠಕ್ಕೆ ಜೊಲ್ಲೆ ದಂಪತಿಗಳು ಭೇಟಿ ನೀಡಿ, ಶ್ರೀಶೈಲ ಸೂರ್ಯಸಿಂಹಾಸನ ಮಠದ ಶ್ರೀ ಶ್ರೀ ಶ್ರೀ 1008 ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿಗಳ ದಿವ್ಯಾಶೀರ್ವಾದ ಪಡೆದು, ಸತ್ಕಾರವನ್ನು ಸ್ವೀಕರಿಸುತ್ತಿರುವುದು.



## ಕನ್ನಡ ರಾಜ್ಯೋತ್ಸವ

ವಿಜಯನಗರದಲ್ಲಿ 67 ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತವಾಗಿ, ತಾಯಿ ಭುವನೇಶ್ವರಿಗೆ ಭಾವಚಿತ್ರಕ್ಕೆ ವಿಜಯನಗರ ಜಿಲ್ಲೆಯ ಉಸ್ತುವಾರಿ ಹಾಗೂ ಮುಜರಾಯಿ, ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಪುಷ್ಪ ನಮನ ಸಲ್ಲಿಸಿ, ಧ್ವಜಾರೋಹಣ ನೆರವೇರಿಸಿ, ಗೌರವ ವಂದನೆ ಸಲ್ಲಿಸುತ್ತಿರುವುದು.

## ವಾಲ್ಮೀಕಿ ಜಯಂತಿ



ನಿಪ್ಪಾಣಿ ನಗರಸಭೆಯಲ್ಲಿ ಆಯೋಜಿಸಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ನಿಮಿತ್ಯ ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಹಾಗೂ ಮುಜರಾಯಿ, ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಭಾವಚಿತ್ರಕ್ಕೆ ಪೂಜೆ ಸಲ್ಲಿಸುತ್ತಿರುವ ದೃಶ್ಯ.



## ಗೋಶಾಲೆಗೆ ಭೇಟಿ

ಗೋಕಾಕ್ ತಾಲೂಕಿನ ಕೌಜಲಗಿ ಗ್ರಾಮದಲ್ಲಿ ಸಾವಯವ ಕೃಷಿ ಪರಿವಾರ (ರಿ) ಹಾಗೂ ಕೇಶವ ಸ್ಮೃತಿ ಟ್ರಸ್ಟ್ (ರಿ) ಅವರು ನಿರ್ಮಿಸಿರುವ "ಗೋಶಾಲೆ"ಗೆ ಜೊಲ್ಲೆ ದಂಪತಿ ಭೇಟಿ ನೀಡಿದ ದೃಶ್ಯ.

## ಕೋಟಿ ಕಂಠ ಗಾಯನ



67 ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಆಯೋಜಿಸಿದ್ದ "ಕೋಟಿ ಕಂಠ ಗಾಯನ" ಕಾರ್ಯಕ್ರಮದಲ್ಲಿ ಮುಜರಾಯಿ, ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಭಾಗವಹಿದ ದೃಶ್ಯ.



## ಚೆಕ್ ವಿತರಣೆ

ಯಕ್ಸಂಬಾ ಪಟ್ಟಣದ ಸೌ. ನಸೀಮಾ ಶಹಬಾಜ ತಾಂಬೋಳೆ ಅವರಿಗೆ ವೈದ್ಯಕೀಯ ಚಿಕಿತ್ಸೆಯ ವೆಚ್ಚಗಳಿಗಾಗಿ ಮಂಜೂರಾದ 35,000 ರೂ.ಗಳು ಪರಿಹಾರದ ಚೆಕ್‌ನ್ನು ಮುಜರಾಯಿ, ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ವಿತರಿಸಲಾಯಿತು.




## ಉದ್ಘಾಟನೆ

ಬೂದಿಹಾಳ ಗ್ರಾಮದಲ್ಲಿ ಅತ್ಯಾಧುನಿಕ ವ್ಯಾಯಾಮ ಶಾಲೆ (ಜಿಮ್)ಯನ್ನು ನಿಪ್ಪಾಣಿ ಸಮಾಧಿ ಮಠದ ಪ.ಪೂಜ್ಯ ಶ್ರೀ ಪ್ರಾಣಲಿಂಗ ಸ್ವಾಮೀಜಿಗಳು ಹಾಗೂ ಪ.ಪೂಜ್ಯ ಶ್ರೀ ಪ್ರಭುಲಿಂಗ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ, ಕು.ಬಸವಪ್ರಸಾದ ಜೊಲ್ಲೆ ಅವರು ಉದ್ಘಾಟಿಸಿ ಮಾತನಾಡುತ್ತಿರುವುದು.



## ಪೂಜೆ ಸಲ್ಲಿಸುತ್ತಿರುವುದು

ನಿಪ್ಪಾಣಿಯ ಹಾಲಸಿದ್ದನಾಥ ಸಕ್ಕರೆ ಕಾರ್ಖಾನೆಯ ಕಬ್ಬು ನುರಿಸುವ ಹಂಗಾಮು ಪ್ರಾರಂಭೋತ್ಸವ ಕಾರ್ಯಕ್ರಮ ನಿಮಿತ್ಯ ಶ್ರೀ ಹಾಲಸಿದ್ದನಾಥ ಮಂದಿರಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸುತ್ತಿರುವುದು.

ಜೊಲ್ಲೆ ಉದ್ಯೋಗ ಸಮೂಹ ರಾಣಿ ಚನ್ನಮ್ಮಾ ವೃತ್ತ, ಯಕ್ಸಂಬಾ ತಾ. ಚಿಕ್ಕೋಡಿ ಜಿ. ಬೆಳಗಾವಿ- 591244 Ph : 9844469288 / 7760983792 E-mail : darpanjus6@gmail.com
ಪ್ರಧಾನ ಸಂಪಾದಕರು :- ಸೌ. ಸುಧಾ ಡಿ. ಪಾಟೀಲ, ಉಪನ್ಯಾಸಕರು, ಕನ್ನಡ ವಿಭಾಗ